ಕರ್ನಾಟಕ ಸರ್ಕಾರ
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002
ದೂರವಾಣಿ: 080-22213530/22275540 ಫ್ಯಾಕ್ಸ್: 080-22214379 ಇ-ಮೇಲ್: kanbhavblr@gmail.com ವೆಬ್ ಸೈಟ್ : www.kannadasiri.co.in

---

**ಸಂಖ್ಯೆ: ಡಿಕೆಸಿ-12028/18/2021 (ಭಾಗ-1)** **ದಿನಾಂಕ: 25.10.2021**

**ನಿರ್ದೇಶಕರು,**
**ತಾಂತ್ರಿಕ ಶಿಕ್ಷಣ ಇಲಾಖೆ,**
**ಬೆಂಗಳೂರು.**

**ಮಾನ್ಯರೆ,**

**ವಿಷಯ : 2021ನೇ ಸಾಲಿನ ಕರ್ನಾಟಕ ರಾಜ್ಯೋತ್ಸವದ ನಿಮಿತ್ತ 'ಕನ್ನಡಕ್ಕಾಗಿ ನಾವು' ಅಭಿಯಾನ ಕಾರ್ಯಕ್ರಮದಡಿ ಬೆಂಗಳೂರಿನಲ್ಲಿ ನಡೆಯುವ ಕರ್ನಾಟಕ ಸಾಂಸ್ಕೃತಿಕ ಉತ್ಸವದಲ್ಲಿ ವಿದ್ಯಾರ್ಥಿ-ವಿಧ್ಯಾರ್ಥಿನಿಯರು ಭಾಗವಹಿಸುವಕುರಿತು.**

* * * * *

ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು 2021ರ ಕರ್ನಾಟಕ ರಾಜ್ಯೋತ್ಸವ ಆಚರಣೆಯನ್ನು ವಿಶೇಷವಾಗಿ ಆಚರಿಸಲು ಸಭೆಗಳನ್ನು ನಡೆಸಿ, ರಾಜ್ಯೋತ್ಸವದ ನಿಮಿತ್ತ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳಲ್ಲಿ ಕರ್ನಾಟಕದ ಗಡಿಪ್ರದೇಶಗಳನ್ನೂ ಒಳಗೊಂಡಂತೆ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು; ಕನ್ನಡದ ಮೂರು ಹಾಡುಗಳನ್ನು ಏಕಕಾಲದಲ್ಲಿ ಹಾಡುವುದು; ಶುದ್ಧ ಕನ್ನಡದಲ್ಲಿ ಮಾತನಾಡುವ ಸ್ಪರ್ಧೆ; ಶುದ್ಧ ಕನ್ನಡದಲ್ಲಿ ಬರೆಯಲು ಮತ್ತು ಮಾತನಾಡಲು ಪ್ರೇರೇಪಿಸುವುದು; ಪುಸ್ತಕ ಮೇಳ, ದೇಶೀಯ ಉಡುಪು ಮತ್ತು ಆಹಾರ ಮೇಳ, ಚಿತ್ರಕಲೆ ಮತ್ತು ಶಿಲ್ಪಕಲಾಕೃತಿಗಳ ಪ್ರದರ್ಶನಗಳೊಂದಿಗೆ ಮೂರು ದಿನಗಳ ಕಾಲ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ಸಾಂಸ್ಕೃತಿಕ ಉತ್ಸವವನ್ನು ದಿನವಿಡೀ ಏರ್ಪಡಿಸಲು ಸೂಚಿಸಿರುತ್ತಾರೆ.

ಈ ನಿಟ್ಟಿನಲ್ಲಿ ರಾಜ್ಯಾದ್ಯಂತ ಕರ್ನಾಟಕ ರಾಜ್ಯೋತ್ಸವದ ನಿಮಿತ್ತ ಹಮ್ಮಿಕೊಳ್ಳಲಾಗಿರುವ 'ಕನ್ನಡಕ್ಕಾಗಿ ನಾವು-ಅಭಿಯಾನ'ದ ಅಂಗವಾಗಿ ದಿನಾಂಕ: 29.10.2021, 30.10.2021 ಹಾಗೂ 31.10.2021 ರಂದು 3 ದಿನಗಳ ಕಾಲ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 'ಕರ್ನಾಟಕ ಸಾಂಸ್ಕೃತಿಕ ಉತ್ಸವ'ವನ್ನು ಬೆಳಗ್ಗೆ: 9.00 ಗಂಟೆಯಿಂದ ರಾತ್ರಿ: 9.00 ಗಂಟೆಯವರೆಗೆ ಪುಸ್ತಕ ಪ್ರದರ್ಶನ, ಶಿಲ್ಪಕಲೆ/ಚಿತ್ರಕಲೆ ಪ್ರದರ್ಶನ, ಸ್ಥಳೀಯ ಉಡುಗೆ-ತೊಡುಗೆ ಮತ್ತು ಆಹಾರ ಮೇಳಗಳನ್ನು ಆಯೋಜಿಸಲಾಗಿದೆ. ನಾಡಿನ ಶ್ರೀಮಂತ ಜನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಎಲ್ಲಾ ಕಲಾಪ್ರಕಾರಗಳನ್ನೂ ಒಂದೇ ವೇದಿಕೆಯಲ್ಲಿ ರಾಜ್ಯದ ಸಾಹಿತಿ/ ಕಲಾವಿದರು ಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸಲಿದ್ದಾರೆ. ಈ ಎಲ್ಲಾ ಕಲಾಪ್ರಕಾರಗಳ ಪ್ರದರ್ಶನಗಳು ಕಾಲೇಜು ವಿದ್ಯಾರ್ಥಿಗಳಿಗೆ ಸಾಹಿತ್ಯಾಭಿರುಚಿ, ವಾಚನಾಭಿರುಚಿ ಹಾಗೂ ಕನ್ನಡ ನಾಡಿನ ಶ್ರೀಮಂತ ಸಂಸ್ಕೃತಿಯ ಪರಿಚಯ ಮತ್ತು ಅವುಗಳತ್ತ ಒಲವನ್ನು ಬೆಳೆಸಲು ಅತ್ಯಂತ ಅನುಕೂಲಕರವಾಗಿವೆ.

2. . . .

ಆದ್ದರಿಂದ ಬೆಂಗಳೂರು ನಗರದಲ್ಲಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ತಾಂತ್ರಿಕ ಕಾಲೇಜುಗಳಾದ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿ ವಿಧ್ಯಾರ್ಥಿನಿಯರನ್ನು ಈ ಕರ್ನಾಟಕ ಸಾಂಸ್ಕೃತಿಕ ಉತ್ಸವದ ಮೂರು ದಿನವೂ ರವೀಂದ್ರ ಕಲಾಕ್ಷೇತ್ರಕ್ಕೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಕೋರಲಾಗಿದೆ.

ಈ ಕಾರ್ಯಕ್ರಮ ಪ್ರತಿ ದಿನ 12 ಗಂಟೆಗಳ ನಿರಂತರ ಕಾರ್ಯಕ್ರಮಗಳ ಪ್ರದರ್ಶನ ಇರುವುದರಿಂದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ–ವಿಧ್ಯಾರ್ಥಿನಿಯರನ್ನು ತಂಡಗಳನ್ನಾಗಿ (ಪ್ರತಿ ತಂಡದಲ್ಲೂ 250 ರಿಂದ 300 ವಿದ್ಯಾರ್ಥಿಗಳಿರುವಂತೆ) ಪ್ರತಿ ದಿನ 4 ಗಂಟೆಗಳಂತೆ ಅಂದರೆ 9 ಗಂಟೆಯಿಂದ ರಿಂದ 1 ಗಂಟೆಯವರಗೆ 2 ಗಂಟೆಯಿಂದ 6 ಗಂಟೆಯವರಗೆ ಅಧಿವೇಶನಗಳಿಗೆ ಕಳುಹಿಸಿಕೊಡವುದು. ದಿನಾಂಕವಾರು ಭಾಗವಹಿಸುವ ಕಾಲೇಜಿನ ಹೆಸರು ಮತ್ತು ವಿಧ್ಯಾರ್ಥಿ–ವಿಧ್ಯಾರ್ಥಿನಿಯರ ಸಂಖ್ಯೆಗಳ ವಿವರಗಳ ಮಾಹಿತಿ ನೀಡುವುದು. ಆಗಮಿಸುವ ವಿದ್ಯಾರ್ಥಿಗಳಿಗೆ ಉಪಾಹಾರ/ಊಟದ ವ್ಯವಸ್ಥೆ ಮಾಡಲಾಗುವುದು. ಈ ಕುರಿತು ಇಲಾಖೆಯ ನೋಡಲ್ ಅಧಿಕಾರಿಗಳಾದ **ಶ್ರೀ ಬಿ. ನಾಗರಾಜ್, ಪತ್ರಾಂಕಿತ ವ್ಯವಸ್ಥಾಪಕರು, (ಚರವಾಣಿ ಸಂಖ್ಯೆ): 9740397918** ಅನ್ನು ಸಂಪರ್ಕಿಸಬಹುದು. ಕರ್ನಾಟಕ ಸಾಂಸ್ಕೃತಿಕ ಉತ್ಸವದ ಕಾರ್ಯಕ್ರಮಕ್ಕೆ ತಮ್ಮ ಸಂಪೂರ್ಣ ಸಹಕಾರವನ್ನು ನೀಡಿ ಯಶಸ್ವಿಗೊಳಿಸಬೇಕೆಂದು ಈ ಮೂಲಕ ಕೋರಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

25/10/2021

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು